ದಿನಾಂಕ 02-06-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 3ನೇ ಪ್ರತಿವಾದಿ ಪರ ಶ್ರೀ ಎಸ್ ಎಲ್ ವಕೀಲರಿಂದಃ-

3. ವಾದಪತ್ರದಲ್ಲಿ ಏನು ಬರೆಸಿದ್ದಾರೆಂದು ತಿಳಿದುಕೊಂಡಿದ್ದೇನೆ. ವಾದಪತ್ರವನ್ನು ನನಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದಾರೆ. 5ನೇ ಖಂಡಿಕೆಯಲ್ಲಿ ಐ.ಹೆಚ್.ಸಿ.38/1983-84 ರ ಮೇಲೆ ಮಲ್ಲಯ್ಯರವರಿಗೆ ಹೆಸರಿಗೆ ಖಾತೆ ಅಗಿದೆ ಎಂದು ತೋರಿಸಲು ಯಾವ ದಾಖಲೆಯನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಪಹಣಿ ಮತ್ತು ಮ್ಯುಟೇಶನ್ ಎಂದು ನುಡಿಯುತ್ತಾರೆ. ಅದು ಯಾವ ಸಾಲಿನ ಪಹಣಿ ಮತ್ತು ಯಾವ ವರ್ಷದ ಮ್ಯುಟೇಶನ್  ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ.  ನಿಪಿ-2 ಮತ್ತು ನಿಪಿ-3 ಈ ದಾಖಲೆಯಲ್ಲಿ ಎಲ್ಲೂ ಕೂಡ ಐ.ಹೆಚ್.ಸಿ.38/1983-84  ಎಂದು ಮಲ್ಲಯ್ಯ ಹೆಸರಿನಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿ ಅದರಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಐ.ಹೆಚ್.ಸಿ.38/1983-84 ಆ ದಾಖಲಾಗಿರುವುದು ಮಂಚಯ್ಯ ಮಾದಯ್ಯ ಬಿನ್ ಸಿದ್ದಮಲ್ಲಯ್ಯರವರ ಹೆಸರಿಗೆ ಆದ ದಾಖಲೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.  ನಿಪಿ-2 ಮತ್ತು ನಿಪಿ-3 ರಲ್ಲಿ ಮಲ್ಲಯ್ಯನ ಹೆಸರಿನ ಯಾವ ರೀತಿ ಮ್ಯುಟೇಶನ್ ಅಗಿದೆ ಎಂದು ನಮೂದು ಇದೆ ಎಂದರೆ ಸಾಕ್ಷಿ ಇಲ್ಲ ಮಲ್ಲಯ್ಯನವರು ಭಾಗ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ. ಅಂದರೆ ಈ ಭಾಗವನ್ನು ಕರಿಯಪ್ಪನವರ ಅಣ್ಣ-ತಮ್ಮಂದಿರು ಭಾಗ ಮಾಡಿಕೊಂಡರು ಎಂದು ನುಡಿಯುತ್ತಾರೆ. ಆ ವಿಭಾಗವನ್ನು ಯಾವಾಗ ಮಾಡಿಕೊಂಡರು ಎಂದು ನೆನಪಿಲ್ಲ. ಸದರಿ ವಿಭಾಗದಲ್ಲಿ ಮಲ್ಲಯ್ಯನಿಗೆ ಈ ಭಾಗ ಕೊಟ್ಟರು ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಖಾತೆ ನಂ.176 ರ ಪ್ರಕಾರ ಖಾತೆ ಮಲ್ಲಯ್ಯನ ಹೆಸರಿಗೆ ಬರುತ್ತಿದೆ, ಐ.ಹೆಚ್.ಸಿ.38/1983-84 ರಂತೆ ಅಲ್ಲ ಎಂದರೆ ಸಾಕ್ಷಿ ಸರ್ವೆ ನಂ.174 ಕ್ಕೆ ಬರುತ್ತಿದೆ ಎಂದು ನುಡಿಯುತ್ತಾರೆ. ಸುಮಾರು 60 ವರ್ಷಗಳ ಹಿಂದೆ ಮಲ್ಲಯ್ಯನ ತಂದೆ ಕರಿಯಯ್ಯನ ಮರಣ

ನಂತರ ಕರಿಯಯ್ಯನ ಅಣ್ಣ-ತಮ್ಮಂದಿರು ಭಾಗ ಮಾಡಿಕೊಂಡಿದ್ದು, ಸದರಿ ಭಾಗದಲ್ಲಿ ಕರಿಯಯ್ಯನ ಒಬ್ಬನೇ ಮಗ ಮಲ್ಲಯ್ಯನ ಭಾಗಕ್ಕೆ ಆಸ್ತಿ ಬಂದಿದ್ದು ಅದರಂತೆ ಖಾತೆ ಅಗಿತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಲ್ಲಯ್ಯನ ಹೆಸರಿಗೆ ಅಗಿದ್ದ ಖಾತೆಯನ್ನು 40 ವರ್ಷಗಳಿಂದಲೂ ಯಾರು ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

4. ದಾವಾ ಸ್ವತ್ತು 2ರ ಮೇಲೆ ವ್ಯವಸಾಯ ಸೇವಾ ಸಹಕಾರ ಸಂಘ, ಬೈರಮಂಗಲರವರಿಂದ ಸಾಲ ತೆಗೆದುಕೊಂಡು ತೀರಿಸುವುದು ಹಾಗೂ ಮತ್ತೆ ಸಾಲ ತೆಗೆದುಕೊಳ್ಳುವುದನ್ನು ಬೈರಯ್ಯ ಮಾಡಿದ್ದಾರೆಂದರೆ ಸರಿ. ಮಲ್ಲಯ್ಯನವರು ಸಾಲ ತೆಗೆದುಕೊಳ್ಳುವ ಬಗ್ಗೆ ನಾನು ಮತ್ತು ನನ್ನ ತಾಯಿ ತಕರಾರು ಮಾಡಿಲ್ಲ ಎಂದರೆ ಸರಿ. ಮಲ್ಲಯ್ಯನವರು ಸಾಲ ತೆಗೆದುಕೊಳ್ಳುತ್ತಿರುವ ವಿಚಾರ ನಮಗೆ ತಿಳಿದಿತ್ತು ಎಂದರೆ ಸರಿಯಲ್ಲ. ನಿಪಿ-7 ಮ್ಯುಟೇಶನನ್ನು ಪ್ರಶ್ನೆ ಮಾಡಿದ್ದೇವೆ. ನಿಪಿ-7ರಲ್ಲಿ ನಮೂದಾಗಿರುವ ಪಾರ್ಟಿಗಳನ್ನು ಈ ದಾವೆಯಲ್ಲಿ ಪಕ್ಷಗಾರರಾಗಿ ಮಾಡಿಲ್ಲ.

5. ಮಲ್ಲಯ್ಯನರವರು ವಾಸವಿದ್ದ ಹಳೆಯ ಮನೆ 2012-13ರಲ್ಲಿ ಶಿಥಿಲಾವಸ್ಥೆಗೆ ಹೋಗಿತ್ತು ಎಂದರೆ ಮಾಹಿತಿ ಇಲ್ಲ. ಮಲ್ಲಯ್ಯರವರ ಮನೆಯನ್ನು ನೋಡಿ 25 ರಿಂದ 30 ವರ್ಷಗಳಾಗಿವೆ. ದಾವಾ ಐಟಂ ನಂ.1ನ್ನು ಮಾರಾಟ ಮಾಡಿ ಮಲ್ಲಯ್ಯರವರು ಮನೆ ಕಟ್ಟಿಕೊಂಡರು ಎಂದರೆ ಮಾಹಿತಿ ಇಲ್ಲ. ಮನೆ ಕಟ್ಟುವ ಉದ್ದೇಶಕ್ಕಾಗಿಯೇ ದಾವಾ ಐಟಂ ನಂ.1ನ್ನು ಮಾರಾಟ ಮಾಡಿದ್ದು ಎಂದರೆ ಸರಿಯಲ್ಲ. ಮನೆ ಕಟ್ಟಿಕೊಳ್ಳಲು ಮಲ್ಲಯ್ಯನಿಗೆ ಏನು ಆದಾಯವಿತ್ತು ಎಂದರೆ ಸಾಕ್ಷಿಯು ಅವರಿಗೆ ಸಪೋರ್ಟ್ ಮಾಡುವವರು ಇದ್ದರು ಎಂದು ನುಡಿಯುತ್ತಾರೆ. ಮಲ್ಲಯ್ಯನಿಗೆ ಮಕ್ಕಳಿಲ್ಲ. ಸಪೋರ್ಟ್ ಮಾಡುತ್ತಿದ್ದವರು ಅವರ ಅಣ್ಣನ ಮಕ್ಕಳು. ಮಲ್ಲಯ್ಯನಿಗೆ ಆದಾಯ ಇಲ್ಲದ ಕಾರಣ ಮನೆ ಕಟ್ಟಲು ಮಲ್ಲಯ್ಯನವರು ದಾವಾ ಐಟಂ ನಂ.1ನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯೇ ಕ್ರಯ ಆದಾಗಿನಿಂದಲೂ

ವ್ಯವಸಾಯ ಮಾಡಿಕೊಂಡೆ ಬರುತ್ತಿದ್ದಾರೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಅಬ್ಬನಕುಪ್ಪೆ ಗ್ರಾಮದವರು. 3ನೇ ಪ್ರತಿವಾದಿಯಿಂದ ಹೇಗಾದರೂ ಮಾಡಿ ಹಣ ವಸೂಲಿ ಮಾಡಬೇಕೆಂದು ಅವರು ಖರೀದಿ ಮಾಡಿರುವ ಆಸ್ತಿಯನ್ನು ಸೇರಿಸಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಮಲ್ಲಯ್ಯನವರ ಬೇರೆ ಆಸ್ತಿಗಳನ್ನು ಸೇರಿಸದೇ ಎರಡೇ ಸ್ವತ್ತುಗಳ ಸಂಬಂಧ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ನಾನೇ ಎತ್ತಿಕಟ್ಟಿ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.